1. 1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ನಿಬಂಧನೆಗಳು ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳಲ್ಲಿ ಅನುದಾನಿತ ಖಾಸಗಿ ಪ್ರೌಢ ಶಾಲೆಗಳಲ್ಲಿನ ಸಹಾಯಕ ಶಿಕ್ಷಕರ ಗ್ರೇಡ್–2 ಹುದ್ದೆಗಳಿಗೆ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರಿಗೆ ಶೇಕಡಾ 50 ರಷ್ಟು ಬಡ್ತಿ ನೀಡುವ ಮೂಲಕ ಭರ್ತಿ ಮಾಡುವ ಅವಕಾಶವನ್ನು ಕಲ್ಪಿಸಿ ಅನುಬಂಧ–3ಕ್ಕೆ ತಿದ್ದುಪಡಿ ಮಾಡಿರುವ ಕುರಿತು ದಿನಾಂಕ 27–12–2007ರಂದು ಹೊರಡಿಸಲಾದ ಇಡಿ/146/ಎಸ್ ಎಲ್‌ಬಿ/2007ನೇ ಸಂಖ್ಯೆಯ ಅಧಿಸೂಚನೆ.

2. 1999ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ನಿಬಂಧನೆಗಳು ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳಲ್ಲಿ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ನೌಕರರ ವಿರುದ್ಧ ಕೈಗೊಳ್ಳಲಾಗುವ ಶಿಸ್ತುಕ್ರಮಗಳಿಗೆ ಸಂಬಂಧಿಸಿದಂತೆ ಅನುಸರಿಸಲಾಗುವ ಕಾರ್ಯವಿಧಾನಗಳನ್ನು ಉಪಬಂಧಿಸಿರುವ ನಿಯಮ 20 (1) (ಬಿ) ಯ ಜೊತೆಗೆ (ಸಿ) ಯನ್ನು ಸೇರಿಸಿ ಹಾಗೂ ನಿಯಮ 21 (2) ನ್ನು ಬದಲಿಯಾಗಿ ಸೇರ್ಪಡೆಗೊಳಿಸಿ ದಿನಾಂಕ 07–01–2008 ರಂದು ಹೊರಡಿಸಲಾದ ಇಡಿ/53/ಎಸ್‌ಎಲ್‌ಬಿ/2007ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್‌ನ್ನು ಕೊಡುತ್ತೇನೆಂದು ಹೇಳಿದ್ದೀರಿ. ನಿನ್ನೆ ಸಾಯಂಕಾಲವೂ ಸಹ ಕೊಡಲಿಲ್ಲ.

ಅಧ್ಯಕ್ಷರು: ರೆಡಿ ಇದೆ. ನಿನ್ನೆಯ ದಿನ ಗದ್ದಲವಾಯಿತಲ್ಲ? ರೆಡಿ ಇದೆ.ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ರೂಲಿಂಗ್ ಕೊಟ್ಟರೆ, ಮುಂದೆ ಯಾವ ರೂಲ್‌ನಲ್ಲಿ ನೀವು ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೀರೆಂದು ಗೊತ್ತಾಗುತ್ತದೆ.

4.ಅಧ್ಯಕ್ಷರ ತೀರ್ಪು

ವಿಷಯ: ದಿನಾಂಕ 29–07–2008ರಂದು ವಿರೋಧ ಪಕ್ಷದ ನಾಯಕರು ಶ್ರೀಮತಿ ಪದ್ಮಪ್ರಿಯ ಅವರ ನಿಧನದ ಬಗ್ಗೆ ಸಲ್ಲಿಸಿದ್ದ ನಿಲುವಳಿ ಸೂಚನೆ ಬಗ್ಗೆ.

ಅಧ್ಯಕ್ಷರು: ರೂಲಿಂಗ್‌ನ್ನು ಕೊಟ್ಟುಬಿಡುತ್ತೇನೆ. ದಿನಾಂಕ: 29–07–2008 ರಂದು ವಿರೋಧ ಪಕ್ಷದ ನಾಯಕರು ಸಲ್ಲಿಸಿರುವ ನಿಲುವಳಿ ಸೂಚನೆ ಬಗ್ಗೆ ವಿಧಾನಸಭಾಧ್ಯಕ್ಷರ ತೀರ್ಪು.

ನಿನ್ನೆ ಬೆಳಿಗ್ಗೆ ದಿನಾಂಕ: 29–07–2008ರಂದು ಉಡುಪಿ ಕ್ಷೇತ್ರದ ಶಾಸಕರಾದ ಶ್ರೀ ರಘುಪತಿ ಭಟ್ ಅವರ ಪತ್ನಿ ಶ್ರೀಮತಿ ಪದ್ಮಪ್ರಿಯ ಅವರ ಸಾವು, ಪೋಲೀಸರು ಮತ್ತು ಗೃಹ ಸಚಿವರ ತದ್ವಿರುದ್ಧ ಹೇಳಿಕೆಗಳ ಹಿನ್ನೆಲೆಯಲ್ಲಿ ಜನರ ಮನಸ್ಸಿನಲ್ಲಿ ಸಂಶಯ ಉಂಟಾಗಿದೆಯೆಂದು, ಆದುದರಿಂದ ಈ ವಿಷಯದ ಬಗ್ಗೆ ನಿಲುವಳಿ ಸೂಚನೆ ಮೂಲಕ ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ಕೊಡಬೇಕೆಂದು ವಿರೋಧ ಪಕ್ಷದ ನಾಯಕರು ಸದರಿ ವಿಷಯವನ್ನು ಪ್ರಸ್ತಾವಿಸುವ ಮೂಲಕ ನನ್ನ ಮನವೊಲಿಸಲು ಪ್ರಯತ್ನ ಮಾಡಿದ್ದಾರೆ.

ಆದರೆ ಸರ್ಕಾರದ ಪರವಾಗಿ ಗೃಹ ಸಚಿವರು ಹಾಗೂ ಇನ್ನಿತರ ಸಚಿವರು ಮತ್ತು ಸದಸ್ಯರು ಇದು ನಿಲುವಳಿ ಸೂಚನೆ ಮೂಲಕ ಚರ್ಚಿಸಲು ಸೂಕ್ತವಾದ ವಿಷಯವಾಗಿರುವುದಿಲ್ಲವೆಂದು ಸಭಾಧ್ಯಕ್ಷರ ಕೆಲವೊಂದು ತೀರ್ಪುಗಳನ್ನು ಉಲ್ಲೇಖಿಸಿ ಅಷ್ಟೇ ಬಲವಾಗಿ ವಿರೋಧ ವ್ಯಕ್ತಪಡಿಸಿದ್ದಾರೆ.

ವಿರೋಧ ಪಕ್ಷಗಳ ಮತ್ತು ಆಡಳಿತ ಪಕ್ಷದ ಎರಡೂ ಕಡೆಯ ವಾದ ಪ್ರತಿವಾದಗಳನ್ನು ಆಲಿಸಿದ್ದೇನೆ.

ಶ್ರೀ ಸುಭಾಷ್ ಕಶ್ಯಪ್ ಅವರ "ಸಂಸದೀಯ ಕಾರ್ಯವಿಧಾನ" ಪುಸ್ತಕದ ಪುಟ ಸಂಖ್ಯೆ 779ರಲ್ಲಿ ನಿಲುವಳಿ ಸೂಚನೆಗಳನ್ನು ಅಂಗೀಕರಿಸಲು ಕೆಲವೊಂದು ನಿರ್ಬಂಧಗಳನ್ನು ಪ್ರಸ್ತಾಪಿಸಲಾಗಿದ್ದು ಅವುಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

1) It does not relate to the matter urgent enough to warrant interruption of the business of the day
2) It does not relate to the matter of recent occurrence which has arisen suddenly but is a continuing matter.
3) It relate to the matter which is sub-judice

ಕೌಲ್ ಮತ್ತು ಶಖ್ಧರ್ ಅವರ "ಸಂಸದೀಯ ಕಾರ್ಯವಿಧಾನ ಹಾಗೂ ನಡವಳಿಕೆ"ಯ ಪುಸ್ತಕದ ಪುಟ ಸಂಖ್ಯೆ: 512–513ರಲ್ಲಿ ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿರುತ್ತದೆ.

An adjournment motion which seeks to rise discussion on a matter pending before any statutory tribunal or authority performing any judicial or quasi-judicial functions or any commisstion or court of

inquiry appointed to inquire into, or investigate, any matter is not ordinary permitted to be moved.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ,ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮ 60ರಲ್ಲಿ ನಿಲುವಳಿ ಸೂಚನೆಯ ಪ್ರಸ್ತಾವನೆಗೆ ಕೆಳಕಂಡ ನಿರ್ಬಂಧಗಳನ್ನು ವಿಧಿಸಲಾಗಿದ್ದು ನಿಯಮ 62(iii)ರ ಪ್ರಕಾರ ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗಿರಬೇಕು ಹಾಗೂ 62(vii) ರಲ್ಲಿ ಪ್ರಸ್ತಾಪಿಸಿರುವಂತೆ ನಿಲುವಳಿ ಸೂಚನೆಯು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿರತಕ್ಕುದಲ್ಲವೆಂದು ಮತ್ತು ನಿಯಮ 63ರಲ್ಲಿ ಈ ಕೆಳಕಂಡಂತೆ ಹೇಳಲಾಗಿದೆ.

"ಯಾವುದೇ ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧಿಕರಣ ಅಥವಾ ಶಾಸನಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಲು ನೇಮಿತವಾದ ಯಾವುದೇ ಆಯೋಗ ಅಥವಾ ವಿಚಾರಣಾ ನ್ಯಾಯಾಲಯದ ಮುಂದೆ ಬಾಕಿ ಇರುವ ವಿಷಯದ ಮೇಲೆ ಚರ್ಚಿಸಲು ಯಾವುದೇ ನಿಲುವಳಿ ಸೂಚನೆಯನ್ನು ತರಲು ಸಾಮಾನ್ಯವಾಗಿ ಅವಕಾಶವನ್ನು ಕೊಡತಕ್ಕುದಲ್ಲ".

ಇದಲ್ಲದೆ ಕಾನೂನು ಸುವ್ಯವಸ್ಥೆ ವಿಚಾರ, ದೈನಂದಿನ ಆಡಳಿತ ವಿಚಾರ ಹಾಗೂ ಆತ್ಮಹತ್ಯಾ ವಿಚಾರಗಳನ್ನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪಿಸಲು ಅವಕಾಶ ಇಲ್ಲವೆಂದು ಈ ಹಿಂದಿನ ಸಭಾಧ್ಯಕ್ಷರು ಹಲವಾರು ತೀರ್ಪುಗಳನ್ನು ನೀಡಿರುತ್ತಾರೆ.

ಪ್ರಸ್ತುತ ಈ ಪ್ರಕರಣದ ಬಗ್ಗೆ ಕರ್ನಾಟಕ ಹಾಗೂ ದೆಹಲಿ ಪೋಲೀಸರಿಂದ ತನಿಖೆ ನಡೆಯುತ್ತಿದ್ದು ಹಾಗೂ ಉಡುಪಿ ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, ಈ ಹಂತದಲ್ಲಿ ಸದನದಲ್ಲಿ ನಿಲುವಳಿ ಸೂಚನೆ ಮೂಲಕ ಚರ್ಚಿಸಲು ನೀಡಿರುವ ಸೂಚನೆಯನ್ನು ತಿರಸ್ಕರಿಸಲಾಗಿದೆ.

ಆದಾಗ್ಯೂ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಈ ವಿಷಯವು ಗಂಭಿರವಾಗಿದ್ದು, ಸಚಿವರ ಮತ್ತು ಪೋಲೀಸರ ಹೇಳಿಕೆಗಳ ತದ್ವಿರುದ್ಧವಾಗಿದ್ದು, ಶ್ರೀಮತಿ ಪದ್ಮಪ್ರಿಯ ಸಾವಿನ ಕುರಿತು ಜನರ ಮನಸ್ಸಿನಲ್ಲಿ ಗೊಂದಲ ಮತ್ತು ಸಂಶಯ ಉಂಟು ಮಾಡಿರುವುದರಿಂದ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಒತ್ತಾಯ ಮಾಡುತ್ತಿರುವ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಯ

ರೂಪದಲ್ಲಿ ಚರ್ಚಿಸುವ ಬದಲಾಗಿ ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಗಳ ನಿಯಮ 69ರ ಮೇರೆಗೆ ದಿನಾಂಕ: 31.07.2008ರಂದು ಸದನದಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದೇನೆ ಹಾಗೂ ಚರ್ಚೆಯಲ್ಲಿ ಭಾಗವಹಿಸುವ ಸದಸ್ಯರುಗಳು ಸದರಿ ವಿಷಯವು ನ್ಯಾಯಾಲಯದಲ್ಲಿ ಇರುವುದನ್ನು ಗಮನದಲ್ಲಿಟ್ಟುಕೊಂಡು ವಿಚಾರಣೆಗೆ ಯಾವುದೇ ರೀತಿ ಅಡಚಣೆಯಾಗದ ರೀತಿಯಲ್ಲಿ ಹಾಗೂ ಧಕ್ಕೆ ಬಾರದ ರೀತಿಯಲ್ಲಿ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಸಭಾಧ್ಯಕ್ಷರೆ, ಹಿಂದಿನ ಸರ್ಕಾರದಲ್ಲಿ..

ಅಧ್ಯಕ್ಷರು: ಮಾನ್ಯ ಬಾಲಕೃಷ್ಣರವರೆ, ಈಗ ಆಯವ್ಯಯದ ಮೇಲೆ reply ಕೊಡಬೇಕು. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಇದು ಬಹಳ important ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಇದಕ್ಕೂ ಕೂಡ ಉತ್ತರವನ್ನು ಕೊಟ್ಟರೆ ನಮಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ನಂತರ ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವೇ ಒಪ್ಪಿಕೊಂಡ ಹಾಗೆ 4–5 ಜನ ಹೊಸ ಸದಸ್ಯರುಗಳು ಇದ್ದಾರೆ. ಅವರುಗಳಿಗೂ 5–5 ನಿಮಿಷಗಳ ಕಾಲ ಮಾತನಾಡಲು ಅವಕಾಶವನ್ನು ಕೊಡಿ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ಒಬ್ಬೊಬ್ಬರು 5–5 ನಿಮಿಷ ಲಿಮಿಟ್ ಹಾಕಿಕೊಂಡು 4–5 ಜನ ಮಾತನಾಡಿದರೂ ಕೂಡ ಅಡ್ಡಿಯಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: 5 ಜನರು ಇದ್ದಾರೆ.

ಅಧ್ಯಕ್ಷರು: ನಾನು 4–5 ಜನರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಅವರು 5–5 ನಿಮಿಷ ಮಾತ್ರ ಮಾತನಾಡಬೇಕು. ತಾವು ಮಾತನಾಡುವ ಬಗ್ಗೆ control ಹಾಕಿಕೊಳ್ಳಬೇಕು.5–5 minutes.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ರೇವಣ್ಣನವರಿಗೆ 5 ಗಂಟೆ ಕಾಲಾವಕಾಶವನ್ನು ಕೊಡುತ್ತೀರಿ, ಹೊಸ ಸದಸ್ಯರುಗಳಿಗೆ 5 ನಿಮಿಷ ಕೊಡದಿದ್ದರಿ ಹೇಗೆ?

ಶ್ರೀ ಎನ್.ಎಲ್. ನರೇಂದ್ರಬಾಬು: ಏಕೆ ಈ ತಾರತಮ್ಯ?

ಅಧ್ಯಕ್ಷರು: 5–5 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. please control ಮಾಡಿ limited to only 4-5 members only.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಸದನದಲ್ಲಿರುವವರಿಗೆ ನೀವು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ದಯವಿಟ್ಟು ಶಾಸಕರುಗಳು ಗಮನಹರಿಸಬೇಕು ಹಾಗೂ ಸಹಕರಿಸಬೇಕು. ನಿಮ್ಮ ಪಕ್ಷದ ಪರವಾಗಿ ನಾನು ಲಿಸ್ಟ್‌ನ್ನು ತೆಗೆದುಕೊಳ್ಳುತ್ತೇನೆ. ಆ ಲಿಸ್ಟ್ ಪ್ರಕಾರ ನಾನು 5 ಜನರಿಗೆ ಅವಕಾಶವನ್ನು ಕೊಡುತ್ತೇನೆ. ಬಾಲಕೃಷ್ಣರವರೆ, ನಂತರ ತಾವು ಮಾತನಾಡಬಹುದು.

5.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸ್ಥಳಾಂತರದ ಬಗ್ಗೆ

ಶ್ರೀ ಹೆಚ್.ಸಿ. ಬಾಲಕೃಷ್ಣ: ಇದು ಬಹಳ important ಆಗಿರುವಂತಹ ವಿಷಯವಾಗಿದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಬಗ್ಗೆ ಮಾತನಾಡಬೇಕಾಗಿದೆ.

ಅಧ್ಯಕ್ಷರು: ಇದು ಮುಗಿದ ಮೇಲೆ ತಾವು ಮಾತನಾಡುವಿರಂತೆ, ತಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.. ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ,

ಶ್ರೀ ಹೆಚ್.ಡಿ. ರೇವಣ್ಣ: ನಿನ್ನೆ ದಿವಸ ನಾನು ಮಾತನಾಡುವುದಕ್ಕೆ ಕೇಳಿದಾಗ ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣವೆಂದು ನನಗೆ ತಾವು ಹೇಳಿದ್ದೀರಿ, ಅದಕ್ಕಾಗಿ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು: ತಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ಮುಗಿದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಹೆಚ್. ಸಿ. ಬಾಲಕೃಷ್ಣ: ನಾನು 5 ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ಟೈಮ್ ಹೋಗುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು. preliminaryಯಾಗಿ 2 ನಿಮಿಷ ಮಾತನಾಡಿ, ಆಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ. 2 ನಿಮಿಷದಲ್ಲಿ ತಾವು ಮುಗಿಸಬೇಕು. preliminary submission only.

ಶ್ರೀ ಹೆಚ್.ಸಿ. ಬಾಲಕೃಷ್ಣ: ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ರಾಜ್ಯ ಸರ್ಕಾರ 1996-97ರಲ್ಲಿ ಪ್ರಾರಂಭ ಮಾಡಿತು. ಬೆಂಗಳೂರಿನ ಜಯನಗರ ಪ್ರದೇಶದಲ್ಲಿ ಎರಡು ಎಕರೆ ಪ್ರದೇಶದಲ್ಲಿ ಇದನ್ನು ಮಾಡಬೇಕೆನ್ನುವ ತೀರ್ಮಾನ ಮಾಡಿ, ಕಡೆಗೆ ಅದು ಚಿಕ್ಕ ಜಾಗ ಆಗಿರುವುದರಿಂದ